## ಜಯಂತಿಗಳು ವ್ಯರ್ಥವಾಗದಿರಲಿ

ಕನಕದಾಸ ಜಯಂತಿಯ ಪ್ರಯುಕ್ತ 'ಚಂದನ'ದಲ್ಲಿ ಮೂಡಿಬಂದ 'ಹಲೋ ಗೆಳೆಯರೇ' ಫೋನ್ ಇನ್ ಕಾರ್ಯಕ್ರಮದ ಮುಖ್ಯ ಅತಿಥಿ ಕನಕದಾಸ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಚಿಕ್ಕಣ್ಣ ಅವರು ನೀಡಿದ ಮಾಹಿತಿ ಚೆನ್ನಾಗಿತ್ತು. ಮರೆಯಾಗುತ್ತಿರುವ ಭಾಷಾಭಿಮಾನ ಹಾಗೂ ಸಾಹಿತ್ಯಾಸಕ್ತಿ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮ ಸಮಾಜದ ಕಣ್ಣು ತೆರೆಸುವಲ್ಲಿ ಒಂದು ಮಹತ್ವದ ಪ್ರಯತ್ನವೇ ಸರಿ. ಈ ವಾಸ್ತವದ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರ ಸಾಮೂಹಿಕ ರಜೆ ಘೋಷಿಸುವ ಬದಲಾಗಿ ಶಾಲಾ ಕಾಲೇಜುಗಳಲ್ಲಿ ಕೆಲವೇ ಗಂಟೆಗಳ ಸಭಾ ಕಾರ್ಯಕ್ರಮವನ್ನು ಆಯೋಜಿಸುವಂತೆ ಆದೇಶಿಸಲು ಮುಂದಾಗುವುದು ಸಾರ್ಥಕ ನಿರ್ಧಾರವಾಗಬಹುದು.

-ಸುಶೀಲಾ ಬಿ.ಆರ್. ರಾಮಣ್ಣ, ಬೆಂಗಳೂರು

## ಇಂಗ್ಲಿಷ್ ನಾಮ ಬಲ

ಕನ್ನಡವನ್ನು ಬಳಸಿ ಬೆಳೆಸುವ ಆಶಯದ ಅಂಗವಾಗಿ ರಾಜ್ಯದ ಎಲ್ಲಾ ಅಂಗಡಿ, ಮುಂಗಟ್ಟುಗಳು, ವಾಣಿಜ್ಯ ಸಂಕೀರ್ಣಗಳಲ್ಲೂ ಕನ್ನಡ ಫಲಕಗಳನ್ನು ಕಡ್ಡಾಯ ಮಾಡಬೇಕು, ಹಾಗೂ ವ್ಯವಹಾರಗಳಲ್ಲೂ ಶೇಕಡಾ 60ರಷ್ಟು ಕನ್ನಡ ಬಳಕೆ ಆಗಬೇಕೆಂಬ ರಾಜ್ಯ ಸರ್ಕಾರದ ನಿರ್ಧಾರ ನಮ್ಮ ಕನ್ನಡ ಚಿತ್ರರಂಗ, ಕಿರುತೆರೆ, ಕನ್ನಡವಾಹಿನಿಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೋ ತಿಳಿಯದು.

ಇಂದಿನ ಕನ್ನಡ ಚಿತ್ರಗಳ, ಕಿರುತೆರೆ ರಿಯಾಲಿಟಿ ಶೋಗಳ ಶೀರ್ಷಿಕೆಗಳು ಆಂಗ್ಲ ಭಾಷಾಮಯವಾಗಿವೆ. ಪ್ರದರ್ಶನಗಳ ನಿರೂಪಕರು, ತೀರ್ಪುಗಾರರು, ಅದರಲ್ಲೂ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನಲ್ಲಿ ಬಹುತೇಕ ಇಂಗ್ಲಿಷ್ ಪದಗಳೇ ತುಂಬಿದ್ದು ಇದು ನಿಜವಾಗಿ ಕನ್ನಡ ಕಾರ್ಯಕ್ರಮವೇ ಎಂಬ ಅನುಮಾನ ಹುಟ್ಟಿಸುವಂತಿರುತ್ತದೆ.

ಡ್ರಾಮ ಜ್ಯೂನಿಯರ್ಸ್, ಸರಿಗಮಪ ಲಿಟಲ್ ಚಾಂಪ್ಸ್, ಮಜಾ ವಿತ್ ಸೃಜಾ, ವೀಕ್ ಎಂಡ್ ವಿತ್ ರಮೇಶ್, ಮಜಾ ಟಾಕೀಸ್, ಬಿಗ್ ಬಾಸ್ ಇಂತಹ ಶೀರ್ಷಿಕೆಗಳಲ್ಲಿ ಕನ್ನಡ ಪದಗಳಿಗಾಗಿ ತಡಕಾಡಬೇಕಷ್ಟೆ.

-ಮೀರಾ ಮೋಹನ್, ಬೆಂಗಳೂರು

ವಾರದ ಪತ್ರ

## ಸರಿಗಮಪ... ಬದಲಾವಣೆ ಬರಲಿ

ಸರಿಗಮಪ ಆಡಿಷನ್ ಶುರುವಾಗಿದೆ. ಹಿಂದಿನ 3–4 ಸೀಜನ್‌ನಿಂದ ಒಂದೇ ತರಹದ ಹಾಡುಗಳು, ತೀರ್ಪುಗಾರರು, ನಿರೂಪಕಿ, ಅದೇ ಮಾತು, ಅದೇ ಹಾಸ್ಯ ನೋಡಿ ವೀಕ್ಷಕರಿಗೆ ಈ ಕಾರ್ಯಕ್ರಮದ ಬಗ್ಗೆ ನಿರಾಸಕ್ತಿ ಮೂಡಿದೆ.

ಆಕರ್ಷಿಸುವಂತೆ ಕಾರ್ಯಕ್ರಮ ಮೂಡಿಬರಲಿ. ಎಂಟು ದಶಕಗಳಿಗೂ ಹೆಚ್ಚಿನ ಕಾಲದ ಕನ್ನಡ ಸಿನಿಮಾ ಚರಿತ್ರೆಯಲ್ಲಿ ಕನ್ನಡಿಗರ ನಾಲಿಗೆಯಲ್ಲಿ ಉಳಿದ ಗೀತೆಗಳು ಸಾಲು ಸಾಲಾಗಿ ನೆನಪಾಗುತ್ತವೆ. ಆದರೆ ಈಗಿನ ಸಿನಿಮಾಗಳಲ್ಲಿ ಇಂತಹ ಹಾಡುಗಳು ಕಾಣಿಸುತ್ತಿಲ್ಲ. ಆದರೆ ಅವು ಎಂದೂ ಹಳತಾಗುವುದಿಲ್ಲ. ಇಂದಿನ ಮಕ್ಕಳನ್ನು ಆಕರ್ಷಿಸುವಂತಹ ಸಿನಿಮಾ ಹಾಡುಗಳ ಜಾಡು ಹಿಡಿದು ಕನ್ನಡ ನಾಡು, ನುಡಿಯ ಚಹರೆಯನ್ನು, ಕನ್ನಡ ಪ್ರಜ್ಞೆಯನ್ನು ಕಟ್ಟಿಕೊಳ್ಳುವಂತಹ ಹಾಡುಗಳನ್ನು ಕೊಟ್ಟ ಮಹಾನ್ ವ್ಯಕ್ತಿಗಳ ಹಾಡುಗಳನ್ನು ಮಕ್ಕಳು ಹಾಡುವಂತಾಗಲಿ.

ಕನ್ನಡ ನುಡಿಗೂ ಕರುಳಿನ ಸಂಬಂಧಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಸೂಚಿಸುವ 'ಅ, ಆ, ಇ, ಈ... ಕನ್ನಡದ ಅಕ್ಷರ ಮಾಲೆ' ಗೀತೆಯನ್ನು ಬರೆದ ಆರ್.ಎನ್. ಜಯಗೋಪಾಲ್ 'ಇದೇ ನಾಡು, ಇದೇ ಭಾಷೆ ಎಂದೆಂದೂ ನನ್ನದಾಗಿರಲಿ...' ಎಂದು ಕನ್ನಡದ ಪರಿಧಿಯೊಂದನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ ಚಿ.ಉದಯಶಂಕರ, 'ಕೊಡಗಿನ ಕಾವೇರಿ... ನೀ ಬೆಡಗಿನ ವೈಯಾರಿ...' ಎಂದು ಹೇಳಿದ ಕಣಗಾಲ್ ಪ್ರಭಾಕರಶಾಸ್ತ್ರಿ, 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ..' ಎಂದು ಹೇಳಿರುವ ದೊಡ್ಡರಂಗೇಗೌಡ, 'ಕನ್ನಡ ಮಕ್ಕಳೆಲ್ಲಾ ಒಂದಾಗಿ ಬನ್ನಿ...' ಎಂದು ಹೇಳಿದ ಜಿ.ವಿ. ಅಯ್ಯರ್ ಇವರೆಲ್ಲರ ಗೀತೆಗಳನ್ನು ಮಕ್ಕಳು ಹಾಡಲಿ ಎನ್ನುವ ಆಸೆಯಿದೆ. ಜಾನಪದ, ಭಾವಗೀತೆ, ಸಂಪ್ರದಾಯದ ಹಾಡುಗಳ ಸುತ್ತುಗಳನ್ನು ಮಾಡಿ, ಹೊಸ ರೀತಿಯ ಹಾಡುಗಳನ್ನು ಮಕ್ಕಳಿಂದ ಹಾಡಿಸುವ ಮೂಲಕ ವಿಭಿನ್ನ ಕಾರ್ಯಕ್ರಮ ಮೂಡಿ ಬರಲಿ.

-ವೀಣಾ ಶಂಕರ್, ಬೆಂಗಳೂರು

## 'ಡ್ರಾಮ' ಪದದ ಅರ್ಥ

'ಡ್ರಾಮ' ಪದಕ್ಕೆ ಇರುವ ಅರ್ಥವನ್ನು ಝೀ ವಾಹಿನಿ ಮಕ್ಕಳಿಂದ ಆಡಿಸಿ, ಮಾಡಿಸುತ್ತಿರುವುದು ಸಂತಸದ ವಿಷಯ. 'ಮಧ್ಯಮ ವ್ಯಾಯೋಗ' ನನ್ನ ಐವತ್ತು ವರ್ಷಗಳ ಹಿಂದಿನ ಕಾಲೇಜು ದಿವಸಗಳನ್ನು ಮರುಕಳಿಸುವಂತೆ ಮಾಡಿತು. ನನಗೆ ಆದ ಆನಂದ ಅಷ್ಟಿಷ್ಟಲ್ಲ. ಅಲೆಕ್ಸಾಂಡರ್, ಏಕಲವ್ಯ, ಅನುಭವ ಮಂಟಪ ಪ್ರಸಂಗಗಳು ಮುದ ನೀಡಿದವು. ಇತಿಹಾಸವನ್ನು ಕೆಣಕಿದರೆ (ತಡಕಿದರೆ) ಸಂಸ್ಕೃತದಲ್ಲಿ ಕಾಳಿದಾಸ, ಭಾಸ, ಬಾಣ, ಭವಭೂತಿ ಮುಂತಾದವರ ಕೃತಿಗಳಿವೆ. ಕನ್ನಡದಲ್ಲಿ ಕುವೆಂಪು ಇತ್ಯಾದಿ ಕನ್ನಡ ದಿಗ್ಗಜರ ಪ್ರಸಂಗಗಳಿವೆ. ಇಂಗ್ಲಿಷ್ ಭಾಷೆಯಲ್ಲಿ ಶೇಕ್ಸ್‌ಪಿಯರ್ ನಾಟಕಗಳ ನೂರಾರು ಪ್ರಸಂಗಗಳಿವೆ. ಬೇರೆ ಪ್ರಸಂಗಗಳ ಜೊತೆಗೆ ಡ್ರಾಮ ಸೂತ್ರದಾರರು ಅತ್ತ ಕಡೆ ಗಮನ ಹರಿಸಿದರೆ ವೀಕ್ಷಕರ ಮನತಣಿಸಲು ಸಾಧ್ಯ. ಇಂತಹ ಪ್ರಯತ್ನ ಶ್ಲಾಘನೀಯ, ಸಾರ್ಥಕ ಅನ್ನಿಸುವುದು.

–ತ.ಮ. ಶಿವಶಂಕರ, ಬೆಂಗಳೂರು

## ಮಾಹಿತಿ ಸೋರಿಕೆಯೇ?

ಬಿಗ್‌ಬಾಸ್‌ನಲ್ಲಿ ಸಿಹಿಕಹಿ ಚಂದ್ರು ಮತ್ತೊಬ್ಬ ಸ್ಪರ್ಧಿ ದಿವಾಕರ್ ಅವರನ್ನು ಬೈದು ಒಂದು 'ಪದ' ಬಳಕೆ ಮಾಡಿ ವಿವಾದಕ್ಕೆ ಕಾರಣರಾಗಿದ್ದರು. ಈ ಸಂಬಂಧ ಅವರನ್ನು ಬಿಗ್‌ಬಾಸ್ ಕನ್ಫೆಷನ್ ರೂಮಿಗೆ ಕರೆದು ಏನಾದರೂ ಸಮಜಾಯಿಷಿ ನೀಡುತ್ತೀರಾ ಎಂದಾಗ ಚಂದ್ರು 'ಆ ವಿಷಯ ನನಗೂ ತಿಳಿಯಿತು' ಅಂತ ಮಾತನ್ನು ಶುರು ಮಾಡಿದರು. ಅದು ಹೇಗೆ ಅವರಿಗೆ ಆ ವಿಷಯ ಮೊದಲೇ ತಿಳಿಯಲು ಸಾಧ್ಯ. ಮನೆಯ ಹೊರಗಡೆ ನಡೆದ ವಿವಾದ ಅವರಿಗೆ ಹೇಗೆ ತಿಳಿಯಿತು? ಯಾರು ತಿಳಿಸಿದರು? ಇದಕ್ಕೆ ಸಮಜಾಯಿಷಿ ಯಾರು ಕೊಡುತ್ತಾರೆ?

–ಜಂಬೂನಾಥ್ ಕೋಟೆಮನೆ, ಬೆಂಗಳೂರು

## ಪಾತ್ರವರ್ಗದ ಪರಿಚಯವಿರಲಿ

ಕಲರ್ಸ್ ಕನ್ನಡದಲ್ಲಿ ರಾಮಚಂದ್ರ ಹೆಗಡೆ ನಿರ್ದೇಶನದ 'ಶನಿ' ಧಾರಾವಾಹಿ ಅಮೋಘವಾಗಿ ಮೂಡಿಬರುತ್ತಿದೆ. ಸೂರ್ಯ, ಅವನ ಪತ್ನಿ ಛಾಯಾ, ಶನಿ, ದೇವೇಂದ್ರ ಮುಂತಾದವರ ಅಭಿನಯ ಮನಸೂರೆಗೊಂಡಿದೆ. ಕಾಕ ರಾಜನ ಮಾತುಗಳಂತೂ ಅದ್ಭುತವಾಗಿವೆ. ನವಗ್ರಹಗಳಲ್ಲಿ ಒಂದಾದ ಶನಿಯ ಕಥೆಯನ್ನಾಧರಿಸಿ ಧಾರಾವಾಹಿ ಪ್ರಸಾರ ಮಾಡುತ್ತಿರುವುದು ಇದೇ ಮೊದಲು. ಪಾತ್ರವರ್ಗದ ಪರಿಚಯ ಮಾಡಬೇಕೆಂದು ಕೋರಿಕೆ.

–ಮಧುರ ಸುಬ್ರಹ್ಮಣ್ಯ

## ನಟನಟಿಯರು ಕನ್ನಡ ಕಲಿಯಲಿ

'ಬಿಗ್ ಬಾಸ್'ನಲ್ಲಿ, ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸ್ಪರ್ಧಿಗಳಿಗೆ ಆಂಗ್ಲ ಪದಗಳಿಗೆ ಕನ್ನಡ ಅರ್ಥವನ್ನು ನೀಡುವ ಟಾಸ್ಕ್ ನಲ್ಲಿ ಬಹುತೇಕ ಸೆಲೆಬ್ರಿಟಿಗಳು ಸರಳ ಪದಗಳಿಗೆ ಉತ್ತರಿಸಲಾಗದೇ ತಬ್ಬಿಬ್ಬಾಗಿದ್ದನ್ನು ಗಮನಿಸಿದರೆ ಕನ್ನಡ ಭಾಷೆಯ ಬಗ್ಗೆ ಇರುವ ಅಭಿಮಾನ, ಕಾಳಜಿ ಕೇವಲ ಚರ್ಚೆಗೆ ಸೀಮಿತವಾಗಿದೆ ಎಂದರೆ ತಪ್ಪಾಗಲಾರದು. ಈ ಮಾದರಿಯ ಭಾಷಾಭಿಮಾನ ಮುಂದುವರಿದರೆ, ಬಹುಶಃ ಮುಂದಿನ ದಿನಗಳಲ್ಲಿ ಹೊರ ರಾಜ್ಯದವರಿಗಿಂತ ಹೆಚ್ಚಾಗಿ ಮೂಲ ಕನ್ನಡದ ಸೆಲೆಬ್ರಿಟಿಗಳಿಗೆ ಕನ್ನಡ ಭಾಷೆಯನ್ನು ಬೋಧಿಸಬೇಕಾಗುವ ಅವಶ್ಯಕತೆ ಬರಬಹುದು ಎಂಬುದನ್ನು ಕನ್ನಡಾಭಿಮಾನಿಗಳು ಗಮನಿಸಿದರೆ ಒಳಿತೇನೋ? ಕನ್ನಡ ರಾಜ್ಯೋತ್ಸವದ ಆಚರಣೆಯಲ್ಲಿ ಕನ್ನಡ ಬಾವುಟ ಹಾರಿಸುವುದಕ್ಕಿಂತ ನಾಲ್ಕೇ-ನಾಲ್ಕು ಕನ್ನಡ ಮಾತುಗಳನ್ನು ಸ್ಪಷ್ಟವಾಗಿ ಆಡುವುದು ಕನ್ನಡಾಂಬೆಗೆ ನೀಡುವ ಉತ್ಕೃಷ್ಟ ಗೌರವ ಎಂದೇ ಹೇಳಬಹುದು! ಈ ವಿಚಾರದಲ್ಲಿ ಚರ್ಚೆಗಿಂತ ಕನ್ನಡದ ಬಳಕೆಯತ್ತ ಕಾರ್ಯೋನ್ಮುಖವಾಗುವುದು ಲೇಸು.

–ರಾಜೀವ್ ಎನ್. ಮಾಗಲ್